**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52**

**ಸಂಖ್ಯೆ: ಆರ್‌ಸಿಎಸ್/ಯುಬಿಸಿ-7/29/ವಿಚಾರಣೆ/2019-20** **ದಿನಾಂಕ: 10-11-2020**

**ವಿಷಯ:** ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ನಿ, ಬೆಂಗಳೂರು ಇದರ ಆಡಳಿತಾಧಿಕಾರಿ ಬದಲಾವಣೆ ಕುರಿತು

**ಉಲ್ಲೇಖ:**
1. ಭಾರತೀಯ ರಿಸರ್ವ್ ಬ್ಯಾಂಕ್‌ನ ಪತ್ರ ಸಂಖ್ಯೆ: ಡಿಒಆರ್.ಎಐಡಿ/ಆರ್‌ಎಸ್‌ಬಿ-7/12.23.283/2019-20 ದಿನಾಂಕ 24-04-2020
2. ಈ ಕಛೇರಿಯ ಸಮಸಂಖ್ಯೆ ಆದೇಶ ದಿನಾಂಕ 18-05-2020
3. ಭಾರತೀಯ ರಿಸರ್ವ್ ಬ್ಯಾಂಕ್‌ನ ಪತ್ರ ಸಂಖ್ಯೆ: ಡಿಒಎಸ್ (ಯುಸಿಬಿ)(ಬಿಜಿ)/ನಂ.244/09.01.286/2020-21 ದಿನಾಂಕ 23-09-2020
4. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 7350/2020 ಇದರಲ್ಲಿ ದಿನಾಂಕ 16-10-2020 ಮತ್ತು 20-10-2020 ರ ನಡವಳಿಗಳು
5. ಸರ್ಕಾರದ ಆದೇಶ ಸಂಖ್ಯೆ: ಸಿಒ 26 ಸಿಆರ್‌ಸಿ 2020 ದಿನಾಂಕ 06-11-2020
6. ಭಾರತೀಯ ರಿಸರ್ವ್ ಬ್ಯಾಂಕ್‌ನ ಪತ್ರ ಸಂಖ್ಯೆ ಡಿಒಎಸ್ (ಯುಸಿಬಿ)(ಬಿಜಿ)/ನಂ.330/09.01.286/2020-21 ದಿನಾಂಕ 06-11-2020

*******

<u>ಪ್ರಸ್ತಾವನೆ</u>

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ, ಬೆಂಗಳೂರು ಇದರ ಭಾರತೀಯ ರಿಸರ್ವ್ ಬ್ಯಾಂಕ್ ಶಾಸನಾತ್ಮಕ ಪರಿವೀಕ್ಷಣೆ ಕೈಗೊಂಡ ಸಂದರ್ಭದಲ್ಲಿ ಅವ್ಯವಹಾರ, ಹಣ ದುರುಪಯೋಗ, ಹಣ ಲಪಟಾಯಿಸುವಿಕೆ ಕಂಡು ಬಂದ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಉಲ್ಲೇಖ (1) ರ ಪತ್ರದಲ್ಲಿನ ಸಲಹೆ ಮೇರೆಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 30(6) ರಡಿಯಲ್ಲಿ ಉಲ್ಲೇಖ (2) ರ ಆದೇಶದಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತ ಮಂಡಳಿ ಸ್ಥಾನದಲ್ಲಿ ಆಡಳಿತಾಧಿಕಾರಿಯನ್ನಾಗಿ ಶ್ರೀ ಎ.ಸಿ.ದಿವಾಕರ, ಸಹಕಾರ ಸಂಘಗಳ ಅಪರ ನಿಬಂಧಕರು ಇವರನ್ನು ನೇಮಿಸಲಾಗಿತ್ತು. ಆಡಳಿತಾಧಿಕಾರಿಯು ದಿನಾಂಕ 18-05-2020 ರಂದು ಪ್ರಭಾರ ವಹಿಸಿಕೊಂಡಿರುತ್ತಾರೆ.

ಬ್ಯಾಂಕ್‌ನ ಆಡಳಿತಾಧಿಕಾರಿಯವರ ಅಧಿಕಾರಾವಧಿಯಲ್ಲಿ ಬ್ಯಾಂಕಿನ ಚಟುವಟಿಕೆಗಳಲ್ಲಿ ಯಾವುದೇ ಪ್ರಗತಿ ಕಂಡು ಬಂದಿರುವುದಿಲ್ಲ. ಸಾಲ ವಸೂಲಾತಿ, ಬ್ಯಾಂಕಿನ ಪುನಃಶ್ಚೇತನಕ್ಕೆ ಕಾರ್ಯಕ್ರಮ ರೂಪಿಸಿಲ್ಲ. ಬ್ಯಾಂಕಿನ ಆಡಳಿತದಲ್ಲಿ ಆಡಳಿತಾಧಿಕಾರಿ ನಿಯಂತ್ರಣ ಹೊಂದಿಲ್ಲವೆಂದು, ಅವರ ಬದಲಿಗೆ

ಬ್ಯಾಂಕಿಂಗ್ ಕ್ಷೇತ್ರದಲ್ಲಿ ತಜ್ಞತೆ ಹೊಂದಿರುವ ವಾಣಿಜ್ಯ ಬ್ಯಾಂಕ್‌ನ ನಿವೃತ್ತ ಅಧಿಕಾರಿಯನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸುವುದು ಉಚಿತವೆಂದು ಉಲ್ಲೇಖ (3) ರ ಪತ್ರದಲ್ಲಿ ಆರ್.ಬಿ.ಐ ಅಭಿಪ್ರಾಯ ಪಟ್ಟಿತ್ತು.

ಈ ಬ್ಯಾಂಕ್‌ನ ಅವ್ಯವಹಾರಗಳ ಸಂಬಂಧಪಟ್ಟಂತೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿರುವ ರಿಟ್ ಅರ್ಜಿ ಸಂಖ್ಯೆ 7350/2020 ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ 16-10-2020 ಮತ್ತು 20-10-2020 ರ ವಿಚಾರಣಾ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ನೀಡುವ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಅನುಭವ ಹೊಂದಿರುವ ವಾಣಿಜ್ಯ ಬ್ಯಾಂಕ್‌ನ ನಿವೃತ್ತ ಅಧಿಕಾರಿಯವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸುವ ಸಂಬಂಧ ಸರ್ಕಾರವು ಕ್ರಮ ಕೈಗೊಳ್ಳಲು ಸೂಚಿಸಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 30(7) ರ ಪ್ರಕಾರ ಆಡಳಿತಾಧಿಕಾರಿಯನ್ನಾಗಿ ಸರ್ಕಾರಿ ಅಧಿಕಾರಿ/ನೌಕರರನ್ನು ನೇಮಿಸಬೇಕೆಂಬ ಅವಕಾಶವಿದ್ದು ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಸಂಬಂಧಪಟ್ಟಂತೆ ಅಧಿನಿಯಮದ ಈ ಪ್ರಾವಧಾನವು ಅನ್ವಯವಾಗದಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 121 ರಡಿಯಲ್ಲಿ ವಿನಾಯಿತಿ ನೀಡಿ ಸರ್ಕಾರವು ಉಲ್ಲೇಖ (5) ರ ಆದೇಶವನ್ನು ಹೊರಡಿಸಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್ ಉಲ್ಲೇಖ (6) ರ ಪತ್ರದಲ್ಲಿ ಬ್ಯಾಂಕಿನ ಆಡಳಿತಾಧಿಕಾರಿ ನೇಮಕಾತಿ ಸಂಬಂಧ ಹೆಸರುಗಳನ್ನು ಸೂಚಿಸಿ ಈ ಕಛೇರಿಗೆ ಪತ್ರ ಬರೆದಿರುತ್ತದೆ.

ಆರ್‌ಬಿಐನ ಕೋರಿಕೆ, ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನ, ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿ ಬದಲಾವಣೆ ಸಂಬಂಧ ಈ ಕೆಳಕಂಡ ಆದೇಶ ಹೊರಡಿಸಿದೆ.

## **<u>ಆದೇಶ</u>**

ಮೇಲೆ ಉಲ್ಲೇಖಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಎಸ್.ಜಿಯಾಉಲ್ಲಾ, ಭಾಆಸೇ, ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಆದ ನಾನು ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ, ಬೆಂಗಳೂರು ಇದರ ಆಡಳಿತಾಧಿಕಾರಿಯಾಗಿ ನೇಮಿಸಿರುವ ಉಲ್ಲೇಖ (2) ರ ಆದೇಶವನ್ನು ಮಾರ್ಪಾಡು ಮಾಡಿ ಆಡಳಿತಾಧಿಕಾರಿಯಾಗಿರುವ ಶ್ರೀ ಎ.ಸಿ.ದಿವಾಕರ, ಸಹಕಾರ ಸಂಘಗಳ ಅಪರ ನಿಬಂಧಕರು ಇವರ ಬದಲಿಗೆ ಶ್ರೀ ಅಶೋಕನ್. ಆರ್, ನಿವೃತ್ತ ಜನರಲ್ ಮ್ಯಾನೇಜರ್, ಕೆನರಾ ಬ್ಯಾಂಕ್, [redacted] ಇವರನ್ನು ಈ ಕೂಡಲೇ

ಜಾರಿಗೆ ಬರುವಂತೆ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ, ಬೆಂಗಳೂರು ಇದರ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದ್ದೇನೆ.

ಹೊಸದಾಗಿ ನೇಮಕಗೊಂಡಿರುವ ಆಡಳಿತಾಧಿಕಾರಿಯು ಕೂಡಲೇ ಪ್ರಭಾರ ವಹಿಸಿಕೊಂಡು ಈ ಕಛೇರಿಗೆ ವರದಿ ಸಲ್ಲಿಸತಕ್ಕದ್ದು.

ಆಡಳಿತಾಧಿಕಾರಿಯು ಈ ಕಛೇರಿಯ ನಿರ್ದೇಶನ, ಆರ್‌ಬಿಐ ನ ನಿರ್ದೇಶನ, ಸಲಹೆ ಸೂಚನೆ, ಸರ್ಕಾರದ ಮತ್ತು ಮಾನ್ಯ ನ್ಯಾಯಾಲಯದ ನಿರ್ದೇಶನ, ಆದೇಶಗಳನ್ನು ಪಾಲಿಸತಕ್ಕದ್ದು. ಸಾಲ ವಸೂಲಾತಿಗೆ ಕ್ರಮ ಕೈಗೊಂಡು ಬ್ಯಾಂಕಿನ ಪುನಃಶ್ಚೇತನಕ್ಕೆ ಕಾರ್ಯಕ್ರಮವನ್ನು ರೂಪಿಸಿ ಕಾಲಬದ್ಧವಾಗಿ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ನನ್ನ ಸ್ವಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ಈ ದಿನ ದಿನಾಂಕ 10-11-2020 ರಂದು ಹೊರಡಿಸಿದೆ.

(ಎಸ್.ಜಿಯಾಉಲ್ಲಾ, ಭಾಆಸೇ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು

ಗೆ,

1. ಶ್ರೀ ಅಶೋಕನ್. ಆರ್,
ನಿವೃತ್ತ ಜನರಲ್ ಮ್ಯಾನೇಜರ್,
ಕೆನರಾ ಬ್ಯಾಂಕ್,
[redacted]
[redacted] ಹಾಗೂ
ಆಡಳಿತಾಧಿಕಾರಿ
ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ,
ನಂ.15, ಸುಬ್ಬರಾಮ ಚೆಟ್ಟಿ ರಸ್ತೆ, ನೆಟ್ಟಕಲಪ್ಪ ಸರ್ಕಲ್,
ಬಸವನಗುಡಿ, ಬೆಂಗಳೂರು-04
2. ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ,
ನಂ.15, ಸುಬ್ಬರಾಮ ಚೆಟ್ಟಿ ರಸ್ತೆ, ನೆಟ್ಟಕಲಪ್ಪ ಸರ್ಕಲ್,
ಬಸವನಗುಡಿ, ಬೆಂಗಳೂರು-04
3. ಶ್ರೀ ಎ.ಸಿ.ದಿವಾಕರ
ಸಹಕಾರ ಸಂಘಗಳ ಅಪರ ನಿಬಂಧಕರು ಇವರಿಗೆ ಕೂಡಲೇ ಹೊಸ ಆಡಳಿತಾಧಿಕಾರಿಗೆ ಪ್ರಭಾರ ವಹಿಸಿಕೊಡಲು ಸೂಚಿಸಿದೆ.